# ಆರೋಗಣೆಯ ಮಾಡೇಳಯ್ಯ

1. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 257.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 52.
3. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 123.
4. **Ref.:** Samagra Dasa Sahitya, Samputa 3.2 published by Kannada & Culture Dept, Govt of Karnataka, Bengaluru, page No. 251.
5. **Note:** Lyrics given here are as per Ref. 1. (Few words are added from Ref. 3). The wordings in Ref. 2 are same as in Ref. 1. The wordings in Ref. 3 are same as in Ref. 1 with few minor variations which are not considered here. The wordings in Ref. 4 are same as in Ref. 3.
6. **Note:** Ankita is different in these books. We have considered Ref.1 as standard and taken that Ankita for listing.
7. **Note:** Singer has followed lyrics as in Ref. 1.

ರಾಗ: ಮುಖಾರಿ ತಾಳ: ಝಂಪೆ

ಆರೋಗಣೆಯ ಮಾಡೇಳಯ್ಯ ಶ್ರೀಮನ್
ನಾರಾಯಣ ಭೋಗ ಸ್ವೀಕರಿಸಯ್ಯ || ಪ ||

ಸರಸಿಜ ಭವಾಂಡದೊಳ್ ಮೇರು ಮಂಟಪದಿ
ಸುರದಿನ ಕರಾದೀಪ್ತ ಜ್ಯೋತಿಶ್ಚಕ್ರವು
ತರಣಿ ಮಂಡಲವ ಪೋಲುವ ರತುನದ ಹೊನ್ನ
ಹರಿವಾಣದಲಿ ದೇವಿ ಬಡಿಸಿಹಳಯ್ಯ || 1 ||

ಅಲ್ಲ ಹೇರಳೆ ಲಿಂಬೆ ಮೆಣಸು ಯಾಲಕ್ಕಿ ಕಾಯಿ
ನೆಲ್ಲೆ ಅಂಬಟೆಕಾಯಿ ಚೆಲ್ವ ಮಾಂಗಾಯಿ

ಬಿಲ್ವ ಮುಂಗ್ರುಳಿ ಸೊಂಡೆ ಚೆಲುವ ಪಾಪಟೆಕಾಯಿ
ಎಲ್ಲಾ ಧರಾದೇವಿ ತಾ ಬಡಿಸಿಹಳಯ್ಯ || 2 ||

ಹಪ್ಪಳ ಸಂಡಿಗೆ ವಿವಿಧ ಶಾಕಂಗಳು
ತುಪ್ಪ ಸಕ್ಕರೆ ಹಣ್ಣು-ಹಂಪಲವು
ಕರ್ಪೂರ ಕಸ್ತೂರಿ ಬೆರಸಿದ ಸಿಖರಿಣಿ
ಒಪ್ಪದಿ ಶ್ರೀದೇವಿ ಬಡಿಸಿಹಳಯ್ಯ || 3 ||

ಎಣ್ಣೋರಿಗತಿರಸ ಬೆಲ್ಲ ಮಂಡಿಗೆಯ
ಅನ್ನ ಕ್ಷೀರಾನ್ನ ಪರಮಾನ್ನಗಳು
ಸಣ್ಣ ಶಾವಿಗೆಯು ಶಾಲ್ಯಾನ್ನವನು ನಿಮಿಷದೊಳ್
ಬಣ್ಣಿಸಿ ದುರ್ಗಾದೇವಿ ಬಡಿಸಿಹಳಯ್ಯ || 4 ||

ನೀ ನಿತ್ಯ ತೃಪ್ತನಹುದು ನಿನ್ನುದರದೊಳ್
ನಾನಾ ಜನರು ಬಂದು ಉಣ್ಣಬೇಕು
ಶ್ರೀನಾಥ ಗದುಗಿನ ವೀರನಾರಾಯಣ
ಅನಾಥ ಬಂಧುವೆ ಪುರಂದರ ವಿಠಲ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಗದುಗಿನ (ಧಾರವಾಡ ಜಿಲ್ಲೆಯಲ್ಲಿರುವ ಊರು) ಶ್ರೀ ವೀರನಾರಾಯಣನ ಸನ್ನಿಧಿಯಲ್ಲಿ ಶ್ರೀ ಪುರಂದರ ದಾಸರು ಈ ಹಾಡನ್ನು ರಚಿಸಿರಬೇಕೆಂದು ಹೇಳುತ್ತಾರೆ. ಎಂದಿನಂತೆ ಸಂಚಾರ ಮಾಡುತ್ತಾ ಮಾಡುತ್ತಾ ಶ್ರೀ ಪುರಂದರ ದಾಸರು ಬರುತ್ತಾರೆ. ಅಂದು ಏಕಾದಶಿ. ಉಪವಾಸ ಜಾಗರಣೆ ಮುಗಿಸಿದ ದಾಸರು ಬೆಳಗಿನ ಪಾರಣೆಗೆ ಶ್ರೀ ವೀರನಾರಾಯಣನನ್ನು ಈ ರೀತಿ ಎಬ್ಬಿಸುತ್ತಾರೆ....

ಹರಿಗೆ ಶ್ರೀದೇವಿ, ಭೂದೇವಿ, ದುರ್ಗಾದೇವಿಯರು ಊಣಬಡಿಸುವ ಬಗೆಯನ್ನು ಬಣ್ಣಿಸಿದ್ದಾರೆ.

**ಆರೋಗಣೆಯ ಮಾಡು** – ಊಟಮಾಡು.

**ಸರಸಿಜ ಭವಾಂಡದೊಳ್…** – ಬ್ರಹ್ಮಾಂಡದಲ್ಲಿ, ಭೂಮಂಡಲದ ಮಧ್ಯದಲ್ಲಿರುವ ಮೇರು ಪರ್ವತವೇ ಮಂಟಪವಾಗಿ, ಸೂರ್ಯನೇ ಬೆಳಕಾಗಿ, ಸೂರ್ಯ ಮಂಡಲದಂತೆ ಹೊಳೆಯುವ ರತ್ನ ಖಚಿತವಾದ ಬಂಗಾರದ ಹರಿವಾಣದಲ್ಲಿ ಲಕ್ಷ್ಮಿಯು ನಿನಗೆ ಉಣಬಡಿಸಿದ್ದಾಳೆ.

**ಜ್ಯೋತಿಶ್ಚಕ್ರ** = ಸುತ್ತಲೂ ದೀವಿಗೆಗಳುಳ್ಳ ತೂಗುದೀಪದಾನಿ

**ಅಲ್ಲ** – ಹಸಿಶುಂಠಿ.

**ಮಾಗಾಯಿ** – ಮಾವಿನಕಾಯಿ.

**ಎಣ್ಣೋರಿಗೆ** – (ಎಣ್ಣೂರಿಗೆ) ಎಣ್ಣೆಯಲ್ಲಿ ಕರಿದ ತಿನಿಸು.

**ಸಿಖರಿಣಿ** = ಸೀಕರಣಿ, ರಸಾಯನ

ಶ್ರೀದೇವಿ, ಭೂದೇವಿ, ದುರ್ಗಾದೇವಿಯರು ಲಕ್ಷ್ಮಿಯ ಮೂರು ರೂಪಗಳು. ಲಕ್ಷ್ಮಿಯು ಬ್ರಹ್ಮಾಂಡ ವ್ಯಾಪಾರವನ್ನು ನಡೆಸುವುದು ಈ ಮೂರು ರೂಪಗಳಿಂದ. ಇವು ಅಪ್ರಾಕೃತ ಸತ್ತ್ವ, ರಜಸ್ಸು, ತಮಸ್ಸುಗಳ ಅಭಿವ್ಯಕ್ತಿ.

**Classification:** Keerthane
**Ankita:** purandara vittala
**Location:** Gadag, Near Hubli in Karnataka State. The presiding deity here is Gadugina Veera Narayana.
**Category:** Pooja Tatva,
**Sub-Category:** oota, Narayana, brahmanda, parvata, deepa, ratna, devi, sakkare, tuppa, hannu, Kasturi, anna, jana, gadag, bandhu,
**Pravachana:** NA
**Explanation:** NA